ದಿನಾಂಕ:24.09.2025 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲು ಃ 1 ನೇ ಎದುರುದಾರರ ಪರ:

1 ನೇ ಎದುರುದಾರರು ಮತ್ತು ಅವರ ಪರ ವಕೀಲರು ಗೇಏರುಹಾಜರಾಗಿದ್ದು ಅವರ ಪರ ಸಾಕ್ಷಿಯ ಪಾಟೀಸವಾಲು ಏನೂ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಪಾಟೀ ಸವಾಲು: 2 ನೇ ಎದುರುದಾರರ ಪರ ಶ್ರೀ ಎಸ್ ಪಿ ಕೆ ವಕೀಲರಿಂದ:

ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ. ನನಗೆ ಈಗ 80 ವರ್ಷ ಪ್ರಾಯ ಎಂದರೆಸ ಾಕ್ಷಿಯ ನನಗೆ ಈಗ 64 ವರ್ಷ ಎಂದು ನುಡಿಯುತ್ತಾರೇ. ನಾನು 1959 ರ ಸಾಲಿನಲ್ಲಿ ಜನಿಸಿದ್ದೇನೆ ಎಂದರೆ ಸರಿ. ನಾನು ಕನ್ನಡಕ ಧರಿಸುವುದಿಲ್ಲ. ನನಗೆ ದೂರದಿಂದ ಮನುಷ್ಯ ಅಥವಾ ಯಾವುದೇ ವಾಹನ ಬಂದರೆ ಕಾಣುವುದಿಲ್ಲ.

ಅಪಘಾತ ಆದ ದಿನ ನನ್ನ ಹತ್ತಿರ ಕನ್ನಡಕ ಇರಲಿಲ್ಲ. ಅಪಘಾತ ಆದ ಸ್ಥಳ 20 ಅಡಿ ಅಗಲದ ನೇರ ರಸ್ತೆ. ಕಾರು ಮತ್ತು ರಿಕ್ಷಾ ಮುಖಾಮುಖಿ ಡಿಕ್ಕಿಯಾಗಿರುತ್ತದೆ. ಅಪಘಾತ ಆದ ಸ್ಥಳದಲ್ಲಿ ನನ್ನ ವಾಹನದಿಂದ ಬಲಕ್ಕೆ ಎರಡೂ ಅಡಿ ರಸ್ತೆ ಉಳಿದಿತ್ತು. ಕಾರು ಬರುವುದನ್ನು ನಾನು ಸುಮಾರು 25 ಮೀಟರ್ ದೂರದಿಂದ ನೋಡಿದ್ದೇನೆ. ಅದು ಆಗ ಸರಿಯಾದ ಬದಿಯಲ್ಲೇ ಬರುತ್ತಿತ್ತು. ಅಪಘಾತ ನನ್ನ ಅಜಾಗರೂಕತೆಯಿಂದ ಆಗಿದೆ ಎಂದರೇ ಸರಿಯಲ್ಲ. ಸಾಕ್ಷಿ ಮುಂದುವರಿದು ಕಾರು ರಾಂಗ್ ಸೈಡಿಗೆ ಬಂದು ಡಿಕ್ಕಿಪಡಿಸಿದೆ ಎಂದು ನುಡಿಯುತ್ತಾರೆ. ಅಪಘಾತದಲ್ಲಿ ಕಾರಿನ ಚಾಲಕನ ಯಾವುದೇ ತಪ್ಪು ಇಲ್ಲ ಎಂದರೆ ಸರಿಯಲ್ಲ.

ಅಪಘಾತದಿಂದ ನನಗೆ ಸಣ್ಣಪುಟ್ಟ ಗಾಯಗಳು ಆಗಿವೆ ಎಂದರೆ ಸರಿಯಲ್ಲ. ನನ್ನ ರಿಕ್ಷಾದಲ್ಲಿ ಅಪಘಾತ ಸಮಯ ಇಬ್ಬರು ಪ್ಯಾಸೆಂಜರ್ ಗಳು ಇದ್ದರು. ಅವರಿಗೆ ಯಾವುದೇ ಗಾಯಗಳು ಆಗಲಿಲ್ಲ.

ನಾನು ಆಸ್ಪತ್ರೆಯಲ್ಲಿ ಒಟ್ಟು 10 ದಿನ ಒಳರೋಗಿಯಾಗಿದ್ದೆನು. ಪುನಃ 6 ದಿನ ಒಳರೋಗಿಯಾಗಿ ದಾಖಲಾಗಿದ್ದೆನು. ನನ್ನ ವಾಕ್ಯ ಪ್ರಮಾಣಪತ್ರದಲ್ಲಿ ನಮೂದಿಸಿರುವಷ್ಟು ದಿನ ನಾನು ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದಿಲ್ಲ

ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ಮೆಡಿಕಲ್ ಬಿಲ್ಲುಗಳಿಗೂ ಹಾಗೂ ಹೇಳುತ್ತಿರುವ ಅಪಘಾತಕ್ಕೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ನಾನು ವಯೋಸಹಜ ಕಾಯಿಲೆಗಳಿಂದ ಬಳಲುತಿತದ್ದು ಅದಕೆಕ ವೈದ್ಯರು ನೀಡಿದ್ದ ಔಷದ ಚೀಟಿಗಳನ್ನು ತಂದು ಈ ವ್ಯವಹರಣೆಯಲ್ಲಿ ಹಾಜರುಪಡಿಸಿದ್ದೇನೆಂದರೆ ಸುಳ್ಳು.

ನನಗೆ ಅಪಘಾತ ಸಮಯದಲ್ಲಿ ರಿಕ್ಷಾ ಚಾಲನೆ ಮಾಡಲು ಡಿ ಎಲ್ ಇರಲಿಲ್ಲ ಎಂದರೆ ಸಾಕ್ಷಿಯು ಡಿಎಲ್ ಇತ್ತು, ಅದು ಅಪಘಾತ ಸಮಯದಲ್ಲಿ ಬಿಸಾಡಿಗೋಗಿದೆ ಎಂದು ನುಡಿಯುತ್ತಾರೆ. ರಿಕ್ಷ ನನ್ನ ಸ್ವಂತದ್ದು. ಈಗಲೂ ರಿಕ್ಷ ಓಡುತ್ತಿದೆ ಎಂದರೆ ಸರಿಯಲ್ಲ.

ನನ್ನ ಡ್ರೈವಿಂಗ್ ಲೈಸನ್ಸ್ ನ್ನು ರಿನೀವಲ್ ಮಾಡಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಡಿ ಎಲ್ ಈಗಲೂ ಚಾಲ್ತಿಯಲ್ಲಿದ್ದು ನಾನು ಈಗಲೂ ಕೂಡಾ ರಿಕ್ಷಾವನ್ನು ಚಾಲನೆ ಮಾಡುತ್ತೇನೆಂದರೆ ಸರಿಯಲ್ಲ. ನನಗೆ ನೀಡಿದ್ದ ಡಿ ಎಲ್ ನ್ನು ಕ್ಯಾನ್ಸಲ್ ಮಾಡಬೇಕು ಎಂದು ಆರ್ ಟಿ ಒ ರವರಿಗೆ ಅರ್ಜಿ ಕೊಟ್ಟಿಲ್ಲ.

ನಾನು ಹೇಳಿರುವಂತಹ ಯಾವುದೇ ಅಂಗನ್ಯೂನ್ಯತೆ ನನಗೇ ಇಲ್ಲ ಎಂದರೆ ಸರಿಯಲ್ಲ. ಅಂಗನ್ಯೂನ್ಯತಾ ಪ್ರ ಪತ್ರವನ್ನು ವೈದ್ಯರ ಹತ್ತಿರ ಪರಿಹಾರ ಪಡೆಯುವ ಸಲುವಾಗಿಯೇ ಪಡೆದಿದ್ದೇನೆ ಎಂದರೆ ಸರಿಯಲ್ಲ. ನನಗೆ ಅಜಯ್ ಎನ್ನುವ ವೈದ್ಯರು ಚಿಕಿತ್ಸೆ ಕೊಟ್ಟಿದ್ದಾರೆ. ಅಜಯ್ ವೈದ್ಯರು ನಗೆ ಯಾವುದೇ ಚಿಕಿತ್ಸೆ ಕೊಟ್ಟಿಲ್ಲ. ಕೇವಲ ಅಂಗನ್ಯೂನ್ಯತಾ ಪ್ರ ಪತ್ರ ಮಾತ್ರ ಕೊಟ್ಟಿದ್ದಾರೆಂದರೆ ಸರಿಯಲ್ಲ. ಅಂಗನ್ಯೂನ್ಯತಾ ಪ್ರ ಪತ್ರವನ್ನು ಸರ್ಕಾರೀ ಆಸ್ಪತ್ರೆಯಲ್ಲಿ ಕೊಡಲಾಗಿದೆ. ಸರ್ಕಾರೀ ಆಸ್ಪತ್ರೆಯಲ್ಲಿ ನಾನು ಚಿಕಿತ್ಸೆ ಪಡೆದಿಲ್ಲ. ಅಂಗನ್ಯೂನ್ಯತಾ ಪ್ರ ಪತ್ರದಲ್ಲಿನ ಅಂಶಗಳನ್ನು ನಾನೇ ತಯಾರಿಸಿ ಅದಕ್ಕೆ ವೈದ್ಯರ ಸಹಿ ಮಾತ್ರ ಪಡೆದಿದ್ದೇನೆ ಎಂದರೆ ಸುಳ್ಳು. ನಿಪಿ-17 ದಾಖಲೆಯನ್ನು ಪರಿಹಾರ ಪಡೆಯುವ ಸಲುವಾಗೇ ಸೃಷ್ಟಿಸಿ ತಂದು ಹಾಜರುಪಡಿಸಿದ್ದೇನೆಂದರೆ ಸುಳ್ಳು. ಪರಿಹಾರ ಪಡೆಯುವ ಸಲುವಾಗಿ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿ ಹಾಜರುಪಡಿಸಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು
ಮತ್ತು ಪ್ರಥಮ ದರ್ಜೆ ನ್ಯಾಯಿಕದಂಡಾಧಿಕಾರಿ, ಪುತ್ತೂರು